ಕೋಲಾರ ಡಿಸ್ಟ್ರಿಕ್ಟ್.

ತಾರೀಖು 6ನೇ ಫಿಬ್ರವರಿ 1889.

ಇದರಿಂದ ತಿಳಿಯಪಡಿಸುವದೇನಂದರೆ, ಸ್ 1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷ್ಯ ಅನುಸರಿಸಿ 'ಯಿದರಡಿ ನಮೂದಾಗುವ ಸರ್ಕಾರೀ ಜಂಗಲ್‌ಗಳನ್ನು ಮತ್ತು ಪ್ಯಾಟೇರ್ಷಗಳನ್ನು ಬಿಸಲುಕಾಲಕ್ಕಾಗಿ 1889ನೇ ಇಸವಿ ಫಿಬ್ರವರಿ ಗುರ್ರೇ ಲಗಾಯತು ಇದೇ ಇಸವಿ ಜ್ಯೂ ಆಖೈರ್ ವರಿಗಿನ ಬಿಸಲು ಕಾಲದಲ್ಲಿ ಬಂದ್‌ಮಾಡಲ್ಪಟ್ಟಿವೆ.

ಸದರೀ ಆಯಾಮಿನಲ್ಲಿ ಯಾವ ವಿಧವಾದ ಷಿಕಾರಿಯೂ ಕುದ್ದಾಗಿ ನಿರೋಧಿಸಲ್ಪಟ್ಟಿಧೆ, ಅತಿಕ್ರಮ ಪ್ರವೇಕಮಾಡುವರು ಪ್ಯಾಸಿಕ್ಯೂಷನಿಗೆ ಗುರಿಯಾಗುವರು.

ಈಗ ಜಂಗಲ್ ವ ಪ್ಯಾಟೇರ್ಷಗಳಲ್ಲಿ ಜಾನವರ್‌ಗಳನ್ನ ಮೇಯಿಸುವದಕ್ಕೆ ಅಪ್ಪಣೆ ಪಡದಿರುವ ರೈತರುಗಳು ಹಳೇ ಹುಲ್ಲಿಗೆ ಬೆಂಕಿಹಾಕುವದನ್ನು ಯಿದರಿಂದ ಅಡ್ಡಿ ಮಾಡಿಯಿರುವದಲ್ಲದೆ ಮತ್ತು ಬೆಂಕಿ ಬೀಳತಕ್ಕದ್ದನ್ನು ಅಡ್ಡಿಪಡಿಸಿ ಬೆಂಕಿಬಿದ್ದಾಗ ಆರಿಸುವದಕ್ಕೆ ಬೇಕಾದ ಸಹಾಯವನ್ನು ಮಾಡಲು ಬದ್ಧರಾಗಿರುತ್ತಾರೆ.

ನಂಬರು.	ಜಂಗಲ್ ವ ಪ್ಯಾಟೇರ್ಷ ಹೆಸರು.	ತಾಲ್ಲೂಕು.
1	ಗಾಜಲದಿಂಣೆ ಪ್ಯಾಟೇರ್ಷ	ಕೋಲಾರ
2	ಸಿಂಗೊಡಹಳ್ಳಿ ಪ್ಯಾಟೇರ್ಷ	
3	ಕಾವುಸಂದ್ರ ಜಂಗಲ್	ಬೌರಿಂಗ್‌ಪ್ಯಾಟೆ
4	ರಾಯಲ್‌ಪಾಡ್ ಮತ್ತು ಸಂಣಕಲ್ ಜಂಗಲ್‌ಗಳು ..	ಶ್ರೀನಿವಾಸಪುರದ ರೇಚ್ ಚಿಂತಾಮಣಿ ತಾಲ್ಲೂಕು
5	ಗಲರ್ಗಪೂಡಿ ಜಂಗಲ್	
6	ಕಾವಿಪುರ ಪ್ಯಾಟೇರ್ಷ	ಮುಳಬಾಗಲ್
7	ನಂದಿಸ್ಟೇಟ್ ಫಾರೆಸ್ಟ್	ಚಿಕ್ಕಬಳ್ಳಾಪುರ
8	ನರಸಿಂಹದೇವರಬೆಟ್ಟ ಜಂಗಲ್	ಚಿಕ್ಕಬಳ್ಳಾಪುರ, ಗೋರೀಬಿದನೂರು ತಾಲ್ಲೂಕು ಮತ್ತು ಗುಡಿಬಂಡೆ ಸಬ್ ತಾಲ್ಲೂಕು

ಅಬ್ದುಲ್‌ರಹಿಮ್ಮಾನ್,
ಅಫಿಸಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 30.

ಮೃತಪಟ್ಟ ಕರೇಗೌಡರ ಆಸ್ತೀ ವಿಷಯದಲ್ಲಿ.

ಅರ್ಜೀದಾರ್ರು 1ನೇ ಜವರೇಗೌಡ, 2ನೇ ಜವನ, 3ನೇ ಕಳಸಾ, 4ನೇ ನಂಜಾ 2–3–4ನೇ ಮೈನರ್ ಗಾರ್ಡಿಯರ್ 1ನೇ ಅರ್ಜಿದಾರ ಜವರೇಗೌಡ ಮೃತಪಟ್ಟ ಸದರೀ ಕರೇಗೌಡರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರದ ತಾಲ್ಲೂಕು ಸಬಾ ಹೋಬಳಿ ಹಿಟ್ಟುವಳ್ಳೀ ಸ್ಥಳದ ಸದರಿ ಜವರೇಗೌಡರು ಸದರಿ ಪಾಸನ್ಥರಾಗಿ ಮೃತಪಟ್ಟ ಕರೇಗೌಡರ ಬೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜವರೇಗೌಡರ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.